**ಕರ್ನಾಟಕ ಸರ್ಕಾರ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.351/2018**

ಪಿ.ಡಬ್ಲ್ಯೂ: 8

ಸಿ.ಡಬ್ಲ್ಯೂ: 10

ಸಾಕ್ಷಿದಾರರ ಹೆಸರು : ಜಗದೀಶ್

ತಂದೆಯ ಹೆಸರು: ಃ ಕಾಳಪ್ಪ

ವಯಸ್ಸು : **41 ವರ್ಷ**

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ರಂಗೇನಹಳ್ಳಿ

**ದಿನಾಂಕ: 16-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಈಗ್ಗೆ ಸುಮಾರು 8 ವರ್ಷಗಳ ಹಿಂದೆ ದುಗ್ಲಾಪುರ ಬಾವಿಕೆರೆ ಕಡೆಗೆ ಹೋಗುವ ರಸ್ತೆ ಯ ಮಧ್ಯದಲ್ಲಿ ಮಧ್ಯಾಹ್ನ 2-30 3-00 ಗಂಟೆ ಸಮಯದಲ್ಲಿ ನಾವು ನಮ್ಮ ಕಾರಿನಲ್ಲಿ ತರೀಕೆರೆಯಿಂದ ರಂಗೇನಹಳ್ಳಿ ಕಡೆಗೆ ಹೋಗುತ್ತಿರುವಾಗ ರಂಗೇನಹಳ್ಳಿ ಕಡೆಯಿಂದ ಒಂದು ಕಾರು ಬರುತ್ತಿದ್ದಾಗ ಒಂದು ಕುರಿ ಮರಿ ರಸ್ತೆ ಮಧ್ಯಕ್ಕೆ ಅಡ್ಡ ಬಂದ ಕಾರಣ ನಮ್ಮ ಕಾರನ್ನು ಎಡದಿಂದ ಬಲಕ್ಕೆ ತೆಗೆದುಕೊಂಡು ಎದುರುಗಡೆಯಿಂದ ಬರುತ್ತಿದ್ದ ಕಾರು ನಮ್ಮನ್ನು ಕಾಪಾಡಲು ಬಲಕ್ಕೆ ತೆಗೆದುಕೊಂಡರು. ಆಗ ನಮ್ಮ ಕಾರು ಅವರ ಕಾರಿಗೆ ಹೋಗಿ ಡಿಕ್ಕಿಪಡಿಸಿರುತ್ತದೆ. ನಮ್ಮ ಕಾರಿನಲ್ಲಿದ್ದ ಚಾಲಕನಿಗೆ ತೀವ್ರತರಹದ ಗಾಯಗಳಾಗಿದ್ದು, ಕಾರಿನಲ್ಲಿದ್ದ ಈಶ್ವರ್ ಪಳನಿ ಮತ್ತು ನನಗೂ ಹಾಗೂ ರಾಜು ರವರಿಗೂ ಪೆಟ್ಟಾಗಿ ಗಾಯಗಳಾಗಿರುತ್ತದೆ. ನನಗೆ ಎದೆಗೆ, ತಲೆಗೆ ಕಾಲಿಗೆ ಗಾಯಗಳಾಗಿರುತ್ತವೆ. ನಾವು ತರೀಕೆರೆ ಸರ್ಕಾರಿ ಆಸ್ಪತ್ರೆಗೆ ಬಂದು ಅಂಬುಲೆನ್ಸ್ ನಲ್ಲಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಹೋಗುತ್ತಿರುವಾಗ ದಾರಿಯಲ್ಲಿ ಕಾರಿನ ಚಾಲಕರಾದ ಸೋಮಶೇಖರ್ ರವರು ಮೃತಪಟ್ಟಿರುತ್ತಾರೆ. ನಂತರ ನಾನು ಶಿವಮೊಗ್ಗದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಸದರಿ ಅಪಘಾತ ಸೋಮಶೇಖರ್ ರವರ ನಿರ್ಲಕ್ಷತದಿಂದ ಆಗಿರುತ್ತದೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿನಾಂಕಃ **14-07-2017** ರಂದು **7-00** ಗಂಟೆ ಸಮಯದಲ್ಲಿ ತರೀಕೆರೆ ವಾಸಿ ಸೋಮಶೇಖರ್ ರವರ ಜೋಡಿಕೋಡಿಹಳ್ಳಿ ಸಮೀಪದಲ್ಲಿರುವ ಅಡಿಕೆ ತೋಟಕ್ಕೆ ನಾವೆಲ್ಲರೂ ಕೆಲಸಕ್ಕೆ ಹೋಗಿದ್ದು ಕೆಲಸ ಮುಗಿಸಿಕೊಂಡು ವಾಪಸ್ಸು ಬರುತ್ತಿರುವಾಗ ಕೆಎ **18** ಎನ್ **2383** ಹೊಂಡಾಯಿ ಕಾರಿನಲ್ಲಿ ಮಧ್ಯಾಹ್ನ **1-15** ಗಂಟೆ ಸಮಯದಲ್ಲಿ ಜಂಬದಹಳ್ಳ ಗ್ರಾಮದ ದೇವಸ್ಥಾನದಿಂದ ಸ್ವಲ್ಪ ದೂರದ ಮುಂದೆ ಇರುವ ಟಾರು ರಸ್ತೆಯ ತಿರುವಿನ ಬಳಿ ಸೋಮಶೇಖರ್ ರವರು ಕಾರನ್ನು ಚಾಲನೆ ಮಾಡಿಕೊಂಡುಬರುತ್ತಿರುವಾಗ ಒಂದು ಕುರಿ ಅಡ್ಡ ಬಂದಿದ್ದು, ಸೋಮಶೇಖರ್ ರವರು ಕಾರನ್ನು ಬಲಕ್ಕೆ ತೆಗೆದುಕೊಂಡಾಗ ಲಕ್ಕವಳ್ಳಿ ಕಡೆಯಿಂದ ಎದುರಿಗೆ ಬಂದ ಕೆಎ **44** ಎಂ **2188** ಬಿಳಿಬಣ್ಣದ ಕಾರಿನ ಚಾಲಕ ಕಾರನ್ನು ಅತೀವೇಗವಾಗಿ ಚಾಲನೆ ಮಾಡಿಕೊಂಡು ಬಂದು ಸೋಮಶೇಖರ್ ರವರು ಚಾಲನೆ ಮಾಡುತ್ತಿದ್ದ ಕಾರಿಗೆ ಡಿಕ್ಕಿಪಡಿಸಿದ ಪರಿಣಾಮ ಸದರಿ ಅಪಘಾತ ಸಂಭವಿಸಿರುತ್ತದೆ. ಸದರಿ ಅಪಘಾತವು ಯೋಗಿಶ್ ರವರು ಅತೀವೇಗ ಮತ್ತು ನಿರ್ಲಕ್ಷತನಿಂದ ರಸ್ತೆಯ ತಿರುವಿನಲ್ಲಿ ಚಲಾಯಿಸಿದ ಕಾರಣ ಸದರಿ ಅಪಘಾತವಾಗಿರುತ್ತದೆ ಎಂದರೆ ಸರಿ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ.**

ಪಾಟೀ ಸವಾಲು ಇಲ್ಲ

**ಮರುವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**